# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 634 (817) |
| ಉತ್ತರಿಸುವ ದಿನಾಂಕ | 11-03-2020 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಂ.ರಮೇಶ್‌ಗೌಡ<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರವು ಏಕಾಏಕಿ ಕಂದಾಯ ಜಾಗದ ನಿವೇಶನಗಳ ನೋಂದಣಿಯನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದರಿಂದ ಸಾಮಾನ್ಯ ಬಡಕುಟುಂಬದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಈಗಾಗಲೇ ದಸ್ತಾವೇಜು ನೋಂದಣಿಯ ವೇಳೆ ತೊಂದರೆಗಳಾಗದಂತೆ ತಡೆಯಲು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 334 ಮುನೋಮು 2008 ದಿನಾಂಕ: 06-04-2019 ರನ್ವಯ ನೋಂದಾಯಿಸಲಾಗುತ್ತಿದೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳ ನೋಂದಣಿಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 06 ಮುನೋಮು 2013 ದಿನಾಂಕ: 18-07-2014ರನ್ವಯ ನೋಂದಾಯಿಸಲಾಗುತ್ತಿದೆ. |
| ಆ | ಸಾಮಾನ್ಯ ಬಡಕುಟುಂಬದ ಜನರು ಒಪ್ಪಂದ ಕರಾರು ಮಾಡಿಕೊಂಡಿದ್ದು, ಇವರಿಗೆ ನೋಂದಣಿಯು ಇಲ್ಲದೇ ಮತ್ತು ಮಾಲೀಕರಿಂದ ಒಪ್ಪಂದ ಕರಾರು ಮಾಡಿಕೊಂಡಿರುವ ಹಣವು ಇಲ್ಲದೆ ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ | ಹಾಗಿದ್ದಲ್ಲಿ, ಸರ್ಕಾರವು ಕೆಲವು ದಿನಗಳ ಗಡವುಗಳನ್ನು ನೋಂದಣಿ ಮಾಡಿಸಿಕೊಳ್ಳುವಂತೆ ಸರ್ಕಾರವು ಕ್ರಮಗಳೇನಾದರೂ ಕೈಗೊಂಡಿದೆಯೇ; ಅದರಂತೆ, ನಿವೇಶನ ಒಪ್ಪಂದ ಕರಾರು ಹಣವನ್ನು ಒಪ್ಪಂದ ಮಾಡಿಕೊಂಡ ಜನ ಸಾಮಾನ್ಯರಿಗೆ ದೊರಕಿಸಿಕೊಡುವಂತೆ ಸರ್ಕಾರವು ಮಾಲೀಕರಿಗೆ ಸೂಚನೆ ನೀಡಿದೆಯೇ; ನೀಡಿದ್ದಲ್ಲಿ ಕಾಲಮಿತಿ ಎಷ್ಟು; | |
| ಈ | ಮುಂಬರುವ ದಿನಗಳಲ್ಲಿ ಈ ರೀತಿ ತೊಂದರೆಗಳಾಗದಂತೆ ಸರ್ಕಾರವು ಕೈಗೊಂಡಿರುವ ಕಾರ್ಯಯೋಜನೆಗಳೇನು? (ಪೂರ್ಣ ವಿವರ ನೀಡುವುದು) | |

**ಸಂಖ್ಯೆ:** ಕಂಇ-ಎಂಎನ್‌ಎಸ್‌ಎ-33/2020

(ಆರ್ ಅಶೋಕ್)
ಕಂದಾಯ ಸಚಿವರು